sl	Drug Name	Amount in Rs
1	ERYTHROMYCIN SYRUP: 125MG/5ML IX 10 BOTTELS	19,11,168/-
2	ALBENDAZOLE SUSPENSION: 400 MG/ 10NK IX10X10ML	9,90,207/-
3	OMEPRAZOLE CAP 20 MG CAP 1X10X10	86,78,026/-
4	TAMOXIFEN CITRATE TABLET (#) 20MG 1X10X10	1,408/-
5	TAMOXIFEN CITRATE TABLET (#) 40MG 1X10X10	77/-
6	ZINK OXIDE 32% W/V {IN A SUITABLE WATER IN OIL EMULSIFIED BASE} CREAM AL. TUBE: 32% W/V 1X15GM	86,241/-
7	POVIDONE IODINE OINTMENT 5% W/W 1X125GM	24,63,939/-
8	VITAMIN 'B' COMPLEX TAB.	77,01,117/-
9	SULPHADOXIN PYRIMETHAMINE TAB.	12,620
	TOTAL	2,18,44,803

ಈ) ಮೇಲಿನಂತೆ (ಇ)ರಲ್ಲಿ ಮಾಹಿತಿ ಹಾಗೂ ವಿವರ ನೀಡಲಾಗಿದೆ.

ಉ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

(199) **ಡಾ॥ ಬಗಲಿ ಸರ್ವಭೌಮ ಸಶಗೌಡ** (ಇಂಡಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಭ್ರಷ್ಟಾಚಾರದ ಪ್ರಕರಣವೊಂದರ ಬಗ್ಗೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಮಾಹಿತಿಗಾಗಿ ಸಂಪರ್ಕಿಸಿದಾಗ ಸದರಿ ಮಾಹಿತಿ ಅವಶ್ಯವಿದ್ದಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಅರ್ಜಿ ಸಲ್ಲಿಸಿದರೆ ಇದನ್ನು ವಿಚಾರಿಸುತ್ತೇನೆಂದು ಉದಾಸೀನತೆಯ ಉತ್ತರವನ್ನು ನೀಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಶಾಸಕರಿಗೆ ಸರ್ಕಾರದಿಂದ ಯಾವುದೇ ಮಾಹಿತಿ ಅಗತ್ಯವಿದ್ದಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕೆ ;

ಇ) ಮಾಹಿತಿ ಹಕ್ಕು ಅಧಿನಿಯಮ ಜಾರಿಗೆ ಬರುವ ಮುನ್ನ ಅವಶ್ಯವಿರುವ ಮಾಹಿತಿಯನ್ನು ಸರ್ಕಾರದಿಂದ ಯಾವ ಕಾನೂನಿನಡಿಯಲ್ಲಿ ಪಡೆಯಲಾಗುತ್ತಿತ್ತು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಮಾನ್ಯ ವಿಧಾನ ಸಭಾ ಸದಸ್ಯರು ಸರ್ಕಾರದ ಕಾರ್ಯದರ್ಶಿಯವರನ್ನು ಭೇಟಿಯಾಗಿ ಭ್ರಷ್ಟಾಚಾರದ ಪ್ರಕರಣವೊಂದಕ್ಕೆ ಸಂಬಂಧಿಸಿದ ಕಡತವನ್ನು ತಮಗೆ ಕೊಡಬೇಕೆಂದು ಒತ್ತಾಯಿಸಿದರು. ಕಡತವನ್ನು ಹಾಗೆ ಕೊಡಲು ಬರುವುದಿಲ್ಲವೆಂದು ಹಾಗೂ ಅದನ್ನು ಮಾನ್ಯ ಸಚಿವರಿಗೆ ಸಲ್ಲಿಸಲಾಗುವುದೆಂದು ಸೌಜನ್ಯದಿಂದಲೇ ಅವರಿಗೆ ತಿಳಿಸಲಾಯಿತು.

ಆ) ಮೇಲಿನ ಉತ್ತರ (ಅ) ರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ಯಾವುದೇ ಕಾನೂನು ಇರಲಿಲ್ಲ.

ವಿದ್ಯಾರ್ಥಿನಿಲಯಗಳಲ್ಲಿ ಮೂಲ ಸೌಲಭ್ಯಗಳ ಕೊರತೆ

(205) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸ್ಥಾಪಿಸಲಾಗಿರುವ ವಿವಿಧ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು (ಗ್ರಾಮವಾರು ವಿವರಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡಗಳಲ್ಲಿವೆ ;

ಇ) ಈ ವಿದ್ಯಾರ್ಥಿನಿಲಯಗಳ ಪೈಕಿ ಬಹುತೇಕ ಹಾಸ್ಟೆಲ್‌ಗಳಿಗೆ ವಿದ್ಯಾರ್ಥಿಗಳಿಗೆ ಪರಿಕರ ಹಾಗೂ ಮೂಲ ಸೌಕರ್ಯಗಳ ಕೊರತೆ ಇರುವುದು ಸರ್ಕಾರದಿಂದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದಲ್ಲಿ, ಯಾವ ಯಾವ ವಿದ್ಯಾರ್ಥಿನಿಯಲಯಗಳಲ್ಲಿ ಯಾವ ಯಾವ ಕೊರತೆಗಳಿವೆ ;

ಉ) ಈ ಕೊರತೆಗಳನ್ನು ನಿವಾರಿಸಲು ಸರ್ಕಾರದ ಮುಂದಿರುವ ಕ್ರಮಗಳೇನು;

ಊ) ಈ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಿಂದ ಸರ್ಕಾರ ಪ್ರತಿ ವರ್ಷ ವೆಚ್ಚ ಮಾಡಿರುವ ಹಣವೆಷ್ಟು ? (ಗ್ರಾಮವಾರು ವಿವರಗಳನ್ನು ಒದಗಿಸುವುದು)